ಸಂಶೋಧಕರು ಬರುತ್ತಿದ್ದಾರೆ. ನಾನೊಬ್ಬ ಜಾತಿಯ ಸೂಕ್ಷ್ಮಗಳೇ ತಿಳಿಯದ ಜಡ ಪಂಡಿತನೆಂದು ಅವರೆಲ್ಲ ಆಡಿಕೊಂಡು ನಗುವುದು ಗ್ಯಾರಂಟಿ!

ಹೀಗೆ ಆಲೋಚನೆಗಳು ಒಂದಕ್ಕೊಂದು ಡಿಕ್ಕಿ ಹೊಡೆಯುತ್ತಿರುವಾಗ ದೇಸಾಯಿ ಹುಲಗಪ್ಪನ ಲೇಖನದ ಮೇಲೆ ಮತ್ತೆ ಕಣ್ಣಾಡಿಸಿದರು. ಅದೇನೇ ಇದ್ದರೂ, ಈ ಹುಡುಗ ಬರೆದಿರುವುದರಲ್ಲಿ ಏನೋ ಆಕರ್ಷಣೆಯಿದೆ! 'ಆಯಾ ಜಾತಿಗಳ ಭಾಷೆಯಲ್ಲಿ ಆಯಾ ಜಾತಿಗಳ ಲೋಕವನ್ನು ಗ್ರಹಿಸುವ ವಿಶಿಷ್ಟ ನುಡಿಗಟ್ಟು ಇರುತ್ತದೆ' ಎಂದು ಬಂಡಾಯ ಚಿಂತಕರು ವಾದಿಸುವುದರಲ್ಲೂ ಅರ್ಥವಿದೆ. ಈ ಹುಡುಗನ ಬರವಣಿಗೆಯಲ್ಲಿ ಶೂದ್ರಗನ್ನಡದ ಬನಿಯಿದೆ. ಪುಟ್ಟ ಪುಟ್ಟ ವಾಕ್ಯಗಳು. ಓದಿದ ತಕ್ಷಣ ಎಲ್ಲ ವಯಸ್ಸಿನವರಿಗೂ ಅರ್ಥವಾಗಬಲ್ಲ ಸ್ಪಷ್ಟತೆ; ಪತ್ರಿಕೆಗಳಿಗೆ ಬರೆದು ಪಳಗಿದ ಕೈಯಿಂದ ಹುಟ್ಟಿದ ಸರಳ, ನೇರ ವಾಕ್ಯಗಳು… ಹುಡುಗನ ಬಗ್ಗೆ ಮೆಚ್ಚುಗೆ ಮೂಡುತ್ತಿರುವಂತೆಯೇ, ಮಹಿಪಾಲ ಗೊಂಡರ್ ಎಂಬ ಹೆಸರು ಮತ್ತೆ ಕಣ್ಣಿಗೆ ಬಿತ್ತು; ನಾನೀಗ ತ್ರಿಭುವನ ಮಹಿಪಾಲರನ್ನು ಗೊಂಡರ್ ಎಂದು ಕರೆಯಹೊರಟರೆ, ನನ್ನ ಇಡೀ ಪುಸ್ತಕದಲ್ಲಿ ರಾಜಭಾಷೆಯಿಂದ ಹಿಡಿದು ಇನ್ನೂ ಏನೇನೋ ಬದಲಿಸಬೇಕಾಗುತ್ತದೆ...

ದೇಸಾಯರಿಗೆ ಮೈ ಉರಿಯತೊಡಗಿತು. 'ಕೊನೇ ಪಕ್ಷ ನನ್ನ ಬೃಹತ್ ಕಾದಂಬರಿ ಪ್ರಕಟವಾಗುವ ತನಕ ನಿನ್ನ ಈ ಅಸಂಬದ್ಧ ಸಂಶೋಧನೆಯ ಬಿಡಿಭಾಗಗಳನ್ನು ಪ್ರಕಟಿಸಬೇಡ' ಎಂದು ಆ ಹುಡುಗನಿಗೆ ಎಚ್ಚರಿಕೆಯ ಮಾತು ಹೇಳಬೇಕೆನ್ನಿಸಿತು. ಆದರೆ, ತನ್ನಂಥ ದೊಡ್ಡ ಲೇಖಕ ಈ ಥರ ಮಾತಾಡಿದರೆ ಸಣ್ಣವನಾಗುವುದು ಗ್ಯಾರಂಟಿ... ಅಥವಾ ಖುದ್ದು ನಾನೇ ಹೇಳಿದರೆ ಅವನು ಇನ್ನೂ ಅತಿ ಮಾಡಬಹುದು! ಇದೆಲ್ಲದರ ಬಗ್ಗೆ ಇನ್ನಷ್ಟು ತಿಳಿಯಾಗಿ ಯೋಚಿಸಬೇಕು ಅನ್ನಿಸಿದ ತಕ್ಷಣ, ದೇಸಾಯರಿಗೆ ಅರಿವಿಲ್ಲದೆಯೇ ಅವರ ಎಡಗೈ ಪಕ್ಕದ ಕಪಾಟಿನಿಂದ ಮೆಲ್ಲಗೆ ಜಾನಿ ವಾಕರ್ ಬಾಟಲು ತೆಗೆದು ಗಾಜಿನ ಲೋಟದೊಳಕ್ಕೆ ಒಂದು ಪೆಗ್ ಹನಿಸಿಬಿಟ್ಟಿತ್ತು! ಥಣ್ಣನೆಯ ಸೋಡಾ ಬೆರೆತ ಡ್ರಿಂಕ್ ಗುಟುಕುಗುಟುಕಾಗಿ ನಿಧಾನವಾಗಿ ಒಳಗಿಳಿದಂತೆ ಹುಡುಗನ ಬಗ್ಗೆ ಮಮತೆ ಹುಟ್ಟಿತು. 'ನಾನು ಬರೆಯುತ್ತಿರುವ ಕಾದಂಬರಿಯಲ್ಲಿ ಅವನ ರಿಸರ್ಚನ್ನೇ ಉಲ್ಲೇಖಿಸಿ ಇಡೀ ಕಾದಂಬರಿಯನ್ನು ಇನ್ನಷ್ಟು ಗಟ್ಟಿಗೊಳಿಸಬಹುದಲ್ಲ!' ಎನ್ನಿಸಿತು. ಆದರೆ, ನಮ್ಮ ಮನಸ್ಸು ಒಪ್ಪುವ ವಿಚಾರವನ್ನು ಮಾತ್ರ ಉಲ್ಲೇಖಿಸಬೇಕಲ್ಲವೆ? ಅದರಲ್ಲೂ ಕಾದಂಬರಿಯಲ್ಲಿ ಹೀಗೆ ಉಲ್ಲೇಖಿಸುತ್ತಾ ಹೋದರೆ ಅಸಂಬದ್ಧವಾಗಿರುತ್ತದೆ…

ಹೀಗೆಂದುಕೊಳ್ಳುತ್ತಲೇ ದೇಸಾಯರ ಕಣ್ಣು ಲೇಖನದ ಕೊನೆಗೆ ಬಂದು ನಿಂತಿತು. ಅಲ್ಲಿ 'ಮುಂದಿನ ಭಾಗ: ಮುಂದಿನ ಸಂಚಿಕೆಯಲ್ಲಿ' ಎಂಬ ಒಕ್ಕಣೆ ಬೇರೆ! ಇದ್ಯಾಕೋ ಅತಿಯಾಯಿತು ಅನ್ನಿಸಿ, ಸಡನ್ನಾಗಿ ಏನೋ ಉತ್ತರ ಹೊಳೆದವರಂತೆ, ಡೈರಿಯ ಮೊದಲ ಪುಟದಲ್ಲೇ ಬರೆದುಕೊಂಡಿದ್ದ ಸಂಸ್ಕೃತಿ ಸಚಿವರ ನಂಬರ್ ಡಯಲ್ ಮಾಡಿ, 'ಶರಣು ಸಾಹೇಬರೇ' ಅಂದರು.

## 3

ಅವತ್ತು ಹುಲಗಪ್ಪ ಮಧ್ಯಾಹ್ನ ಊಟಕ್ಕೆ ಬರುವುದನ್ನೇ ಕಾಯುತ್ತಾ ನಿಂತಿದ್ದವನಂತೆ ಕಂಡ ಹಾಸ್ಟೆಲ್ ಮ್ಯಾನೇಜರ್, 'ಸಾ, ತಾಸೀಲ್ದಾರ್ ಆಫೀಸಿಂದ ಎರಡು ಕಿತ ಫೋನ್ ಬಂದಿತ್ತು ಸಾ. ಫೋನ್ ಮಾಡಬೇಕಂತೆ ಸಾ' ಎಂದು ಒಂದೇ ಉಸುರಿನಲ್ಲಿ ಹೇಳಿ ಫೋನ್ ನಂಬರ್ ಬರೆದ ಚೀಟಿಯನ್ನು ಹುಲಗಪ್ಪನ ಕೈಗಿಟ್ಟ. ಈ ತಾಸೀಲ್ದಾರ್ ಯಾರು? ಯಾಕೆ ಫೋನ್ ಮಾಡಿರಬಹುದು? ಕ್ಯಾಸ್ಟ್ ಸರ್ಟಿಫಿಕೇಟಿಗೆ ಕೂಡ ಈಚೆಗೆ ತಾಲೂಕಾಫೀಸ್ ಕಡೆ ಹೋಗಿಲ್ಲವಲ್ಲ? ಹುಲಗಪ್ಪನಿಗೆ ಯಾವುದೂ ಬಗೆಹರಿಯಲಿಲ್ಲ. ಸರಿ, ಆಮೇಲೆ ಫೋನ್ ಮಾಡೋಣ ಎಂದುಕೊಂಡು ಮೆಟ್ಟಲು ಹತ್ತಿ, ರೂಮಿನ ಬೀಗ ತೆಗೆಯುವಷ್ಟರಲ್ಲಿ ಹಾಸ್ಟೆಲ್ ಅಟೆಂಡರ್, 'ಸಾ ಸಾ ತಾಸೀಲ್ದಾರ್ ಆಫೀಸಿಂದ ಫೋನ್ ಬಂದೈತೆ ಸಾ' ಎಂದು ಕೂಗಿಕೊಂಡ. ಹುಲಗಪ್ಪನ ಎದೆ ದಡಗುಟ್ಟತೊಡಗಿತು. ಗಾಬರಿಯಿಂದಲೇ ಮೆಟ್ಟಲಿಳಿದು ಹೋಗಿ ರಿಸೀವರ್ ಎತ್ತಿಕೊಂಡು, 'ಸಾರ್' ಅಂದ.

ಇದೇನು ಕಥೆಯೋ ಎಂದು ಹಾಸ್ಟೆಲ್ ಮ್ಯಾನೇಜರು, ಕ್ಲರ್ಕು, ಅಟೆಂಡರು ಹುಲಗಪ್ಪನ ಮುಖವನ್ನೇ ಗಾಬರಿಯಿಂದ ನೋಡುತ್ತಿದ್ದರು. ಅದನ್ನು ಗಮನಿಸಿದ ಹುಲಗಪ್ಪ ಆದಷ್ಟೂ ಸೂಚ್ಯವಾಗಿ, 'ಓಕೇ ಸಾರ್' 'ನೋಡ್ತಿನಿ ಸಾರ್' 'ಇಲ್ಲ ಸಾರ್' 'ಸರಿ ಸಾರ್' 'ಚೆಕ್